ಕ್ರಿ.ಮಿ.ನಂ. 96 /2022
ಪಿ.ಡಬ್ಲ್ಯು: 01

**<u>ಸಾಕ್ಷಿಯನ್ನು ಇಂದು ದಿನಾಂಕಃ 27.11.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ. ಎಸ್ ಎಸ್ ಕೆ., ವಕೀಲರಿಂದ ಎದುರುದಾರರ ಪರವಾಗಿ</u>**

1. ನನ್ನ ಮತ್ತು 1 ನೇ ಎದುರುದಾರನ ಮದುವೆಯ ಜುಮನಾಳ ಗ್ರಾಮದ ಶ್ರೀ ಕಾಡಸಿದ್ದೇಶ್ವರ ದೇವಸ್ಥಾನದಲ್ಲಿ ಆಗಿರುತ್ತದೆ ಎಂದರೆ ಸರಿ. ನಮ್ಮ ಮದುವೆಯನ್ನು ಎದುರುದಾರರ ಮನೆಯವರು ಅವರ ಖರ್ಚಿನಲ್ಲಿ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಮದುವೆಯ ನಿಶ್ಚಿತಾರ್ಥದ ಖರ್ಚನ್ನು ಸಹ ಎದುರುದಾರರು ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತವರು ಮನೆಯವರು ನಮ್ಮ ಮದುವೆಯಕಾಲದಲ್ಲಿ 2.1/2 ತೊಲೆ ಬಂಗಾರ, ರೂ.10 ಸಾವಿರ ಹಣವನ್ನು ಬಟ್ಟೆ ಮತ್ತು ವಾಚ್ ಗಾಗಿ ಮತ್ತು ರೂ.15 ಸಾವಿರ ಗೃಹಪಯೋಗಿ ಸಾಮಾನುಗಳಿಗಾಗಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ತವರು ಮನೆಯವರು 5 ತೊಲಿ ಬಂಗಾರ, ಬಟ್ಟೆ ಮತ್ತು ವಾಚ್ ನ್ನು ಕೊಡಿಸಿರುತ್ತಾರೆ ಮತ್ತು ರೂ.60 ಸಾವಿರ ಬೆಲೆ ಬಾಳುವ ಗೃಹಪಯೋಗಿ ಸಾಮಾನುಗಳನ್ನು ಕೊಡಿಸಿರುತ್ತಾರೆ ಎಂದು ಹೇಳುತ್ತಾರೆ. ನಮ್ಮ ತವರು ಮನೆಯವರು 5 ತೊಲಿ ಬಂಗಾರ, ಬಟ್ಟೆ ಮತ್ತು ವಾಚ್ ಮತ್ತು ರೂ.60 ಸಾವಿರ ಬೆಲೆ ಬಾಳುವ ಗೃಹಪಯೋಗಿ ಸಾಮಾನುಗಳನ್ನು ಎದುರುದಾರರಿಗೆ ಕೊಡಿಸಿರುತ್ತಾರೆ ಎಂದು ತೋರಿಸಲು ನಾನು ಯಾದಿಯನ್ನು ನ್ಯಾಯಲಾಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ತವರು ಮನೆಯವರು 5 ತೊಲಿ ಬಂಗಾರ, ಬಟ್ಟೆ ಮತ್ತು ವಾಚ್ ಮತ್ತು ರೂ.60 ಸಾವಿರ ಬೆಲೆ ಬಾಳುವ ಗೃಹಪಯೋಗಿ ಸಾಮಾನುಗಳನ್ನು

ಎದುರುದಾರರಿಗೆ ಕೊಡಿಸಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಮ್ಮ ತವರು ಮನೆಯವರು ನನ್ನ ಸೀಮಂತ ಕಾರ್ಯಕ್ರಮವನ್ನು ಮಾಡಿಲ್ಲ ಎಂದರೆ ಸಾಕ್ಷಿಯು ಎದುರುದಾರರು ನನ್ನೊಂದಿಗೆ ಜಗಳ ಮಾಡಿ ನನ್ನ ತವರು ಮನೆಗೆ ಕಳುಹಿಸಿರುತ್ತಾರೆ ಎಂದು ಹೇಳುತ್ತಾರೆ. ನಾನು ನನ್ನ ಅರ್ಜಿಯಲ್ಲಿ ಎದುರುದಾರರು ನನ್ನೊಂದಿಗೆ ಜಗಳ ಮಾಡಿ ನನ್ನನ್ನು ನನ್ನ ತವರು ಮನೆಗೆ ಕಳುಹಿಸಿರುವ ಬಗ್ಗೆ ನಮೂದು ಮಾಡಿರುತ್ತೇನೆ. ನಾನು ನನ್ನ ಅರ್ಜಿಯಲ್ಲಿ ಮತ್ತು ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಎದುರುದಾರರು ನನ್ನೊಂದಿಗೆ ಜಗಳ ಮಾಡಿ ನನ್ನನ್ನು ನನ್ನ ತವರು ಮನೆಗೆ ಕಳುಹಿಸಿರುವ ಬಗ್ಗೆ ನಮೂದು ಮಾಡಿರುತ್ತೇನೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷಿಯು ಮುಂದುವರೆದು ಈಗ ನಾನು ಬಿ ಎ ಪದವಿಯನ್ನು ಪೂರೈಸಿರುತ್ತೇನೆ.

3. ನಮ್ಮ ತವರು ಮನೆಯವರು ತಮ್ಮ ಮನೆಯಲ್ಲಿ ಸೀಮಂತ ಕಾರ್ಯಕ್ರಮ ಮಾಡುವ ಪದ್ಧತಿ ಇಲ್ಲ ಎಂದು ಎದುರುದಾರರಿಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸೀಮಂತ ಕಾರ್ಯಕ್ರಮವನ್ನು 2 ನೇ ಎದುರುದಾರನ ಸಹೋದರಿಯಾದ ದಾನಮ್ಮ ಗಂ. ಮಾಂತಯ್ಯ ಹಿರೇಮಠರವರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ಸೀಮಂತದ ಕಾರ್ಯಕ್ರಮ ಎಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ಸೀಮಂತದ ಕಾರ್ಯಕ್ರಮ ಆಗಿರುವುದಿಲ್ಲ ಎಂದು ಹೇಳುತ್ತಾರೆ. ನಾನು ನನ್ನ ಅರ್ಜಿಯ ಮತ್ತು

ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ನಮ್ಮ ಸೀಮಂತ ಕಾರ್ಯಕ್ರಮ ಆಗಿರುವುದಿಲ್ಲ ಎಂದು ಬರೆಸಿರುವುದಿಲ್ಲ ಎಂದರೆ ಸರಿ.

4. ನಾನು ಮತ್ತು 1ನೇ ಎದುರುದಾರನು ನಮ್ಮ ಮದುವೆಯಾದ ನಂತರ 6-7 ವರ್ಷಗಳ ಕಾಲ ಚೆನ್ನಾಗಿ ಇದ್ದೇವು. ನಾನು ಮತ್ತು 1ನೇ ಎದುರುದಾರನು 6-7 ವರ್ಷಗಳ ಕಾಲ ನಮ್ಮ ಅತ್ತೆ ಮಾವನೊಂದಿಗೆ ವಾಸವಾಗಿದ್ದೇವು. ನನ್ನ ಅಕ್ಕನ ಹೆಸರು ಜ್ಯೋತಿ ಗಂ. ಸಿದ್ದಲಿಂಗಯ್ಯ ಹಿರೇಮಠ ಇರುತ್ತಾರೆ. ಸಿದ್ದಲಿಂಗಯ್ಯನ ತಂದೆಯ ಹೆಸರು ಷಣ್ಮುಖಯ್ಯ ಇರುತ್ತದೆ. ಷಣ್ಮುಖಯ್ಯ ಮತ್ತು 2ನೇ ಎದುರುದಾರನು ಖಾಸ ಅಣ್ಣ ತಮ್ಮಂದಿರು ಎಂದರೆ ಸರಿ. ಷಣ್ಮುಖಯ್ಯನಿಗೂ ಮತ್ತು ಎದುರುದಾರರಿಗೂ ಮೊದಲಿನಿಂದಲೂ ಆಸ್ತಿಯ ವಿಚಾರವಾಗಿ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ.

4. ನಾನು ಎದುರುದಾರನ ವಿರುದ್ಧ ಈ ಪ್ರಕರಣ ಮತ್ತು ಇನ್ನೊಂದು ಸಿವಿಲ್ ದಾವೆಯನ್ನು ಸಲ್ಲಿಸಿರುತ್ತೇವೆ. ನಾನು ಎದುರುದಾರರ ವಿರುದ್ಧ ಅಸಲು ದಾವೆ ನಂ.229/2022ರಂತೆ ಜೀವನಾಂಶ ಕೋರಿ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ ಬಸವನ ಬಾಗೇವಾಡಿರವರಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಸದರಿ ದಾವೆಯಲ್ಲಿ ನನಗೆ ಮಾಸಿಕ ರೂ.7000/- ಮತ್ತು 2 ಮತ್ತು 3ನೇ ಅರ್ಜಿದಾರರಿಗೆ ಮಾಸಿಕ ರೂ.5000/- ಜೀವನಾಂಶವನ್ನು ಕೋರಿ ಸಲ್ಲಿಸಿರುತ್ತೇನೆ. ಅದೇ ರೀತಿಯಾಗಿ ನಾನು ಎದುರುದಾರರ ವಿರುದ್ಧ ನಮ್ಮ ಕುಟುಂಬದ ಆಸ್ತಿಗಳಲ್ಲಿ ಭಾಗ ಕೇಳಿ ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ವಿಜಯಪೂರವರಲ್ಲಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಅಸಲು ದಾವೆ ನಂ.229/2022ರ ದಾವೆಯಲ್ಲಿ ನಾನು ಹಾಕಿರುವ ತಾತ್ಕಾಲಿಕ

ತಡೆಯಾಜ್ಞೆಯು ಅರ್ಜಿಯು ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ತಾತ್ಕಾಲಿಕ ತಡೆಯಾಜ್ಞೆಯು ಅರ್ಜಿಯು ವಜಾ ಆದ ನಂತರ ನಾನು ಮಾನ್ಯ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ವಿಜಯಪೂರರವರಲ್ಲಿ ಸಲ್ಲಿಸರುತ್ತೇನೆ ಎಂದರೆ ಸರಿ.

**ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ,

**ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**